# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 618
ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 24.09.2020
ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸೌಕೂರು ಏತ ನೀರಾವರಿ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದೆಯೇ; (ಹಾಗಿದ್ದಲ್ಲಿ ವರದಿಯ ಪ್ರತಿಯನ್ನು ಒದಗಿಸುವುದು); ಈ ಯೋಜನೆಯ ಅಂದಾಜು ಮೊತ್ತವೆಷ್ಟು; ಈ ಯೋಜನೆಯು ಹೊಂದಿರುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು; ಈ ಯೋಜನೆಯು ಹಾದು ಹೋಗುವ ಗ್ರಾಮಗಳ ವಿವರವನ್ನು ಒದಗಿಸುವುದು: | ಸೌಕೂರು ಏತ ನೀರಾವರಿ ಯೋಜನೆಯ ರೂ.73.71 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯು 1350.00ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಹೊಂದಿದ್ದು, ಸದರಿ ಯೋಜನೆಯಡಿ ಸೌಕೂರು, ಕರ್ಕುಂಜೆ, ಕೆಂಚನೂರು, ದೇವಲ್ಕುಂದ, ಕನ್ಯಾನ, ಹಟ್ಟಿಯಂಗಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. (ಯೋಜನಾ ವರದಿಯನ್ನು ಸಿ.ಡಿ.ಯಲ್ಲಿ ಅಳವಡಿಸಿ, ಇದರೊಂದಿಗೆ ಲಗತ್ತಿಸಿದೆ) |
| ಆ) | ಖಾಸಗಿ ವಿದ್ಯುತ್ ಉತ್ಪಾದನೆಯವರಿಗೆ ಸಹಕರಿಸುವ ಉದ್ದೇಶದಿಂದ ವಾರಾಹಿ ಬಲದಂಡೆ ಮೂಲ ಯೋಜನೆಯಲ್ಲಿರುವ ಶಂಕರನಾರಾಯಣ, ಅಂಪಾರು, ಕಾವ್ರಾಡಿ, ಹಳ್ನಾಡು ಗ್ರಾಮವನ್ನು ಕೈಬಿಟ್ಟು ಈ ಯೋಜನೆ ರೂಪಿಸಿರುವುದು ನಿಜವೇ; ಇಲ್ಲವಾದಲ್ಲಿ ಸಕಾರಣವನ್ನು ತಿಳಿಸುವುದು; | ವಾರಾಹಿ ಬಲದಂಡೆ ನಾಲೆ ಮೂಲ ಯೋಜನೆಯಲ್ಲಿ ಶಂಕರನಾರಾಯಣ, ಅಂಪಾರು, ಕಾವ್ರಾಡಿ, ಹಳ್ನಾಡು ಗ್ರಾಮಗಳು ಸೇರಿರುತ್ತವೆ. ಆದ್ದರಿಂದ ಸೌಕೂರು ಏತ ನೀರಾವರಿ ಯೋಜನೆಯಡಿಯಲ್ಲಿ ಸದರಿ ಗ್ರಾಮಗಳನ್ನು ಸೇರ್ಪಡಿಸಿಕೊಂಡಿರುವುದಿಲ್ಲ. |
| ಇ | ವಾರಾಹಿ ನೀರಾವರಿ ಯೋಜನೆಯು ಪ್ರಾರಂಭವಾಗಿ 40 ವರ್ಷಗಳೇ ಆದರೂ ಶಂಕರನಾರಾಯಣ, ಅಂಪಾರು, ಕಾವ್ರಾಡಿ, ಹಳ್ನಾಡು ಗ್ರಾಮಗಳ ಭೂಸ್ವಾಧೀನ ಪ್ರಕ್ರಿಯೆ ಪೂರ್ಣವಾಗದಿರಲು ಕಾರಣವೇನು; ಯೋಜನೆಗೆ ಅಗತ್ಯವಾದ ಭೂಮಿ ಎಷ್ಟು; ಪ್ರಸ್ತುತ ಭೂಸ್ವಾಧೀನ ಪಡಿಸಲಾದ ಭೂಮಿ ಎಷ್ಟು; ಭೂಸ್ವಾಧೀನ ಪ್ರಕ್ರಿಯೆಗೆ ಬಾಕಿ ಇರುವ ಭೂಮಿ ಎಷ್ಟು; (ಗ್ರಾಮವಾರು ವಿವರ ನೀಡುವುದು) ಈ ಭೂಸ್ವಾಧೀನ ಪ್ರಕ್ರಿಯೆ ಮತ್ತು ಕಾಲುವೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಕಾಲಮಿತಿ ಯಾವುದು? | ವಾರಾಹಿ ನೀರಾವರಿ ಯೋಜನೆಯಡಿ ಕುಂದಾಪುರ ತಾಲ್ಲೂಕಿನಲ್ಲಿ ಬರುವ ಶಂಕರನಾರಾಯಣ, ಅಂಪಾರು, ಕಾವ್ರಾಡಿ, ಹಳ್ನಾಡು ಗ್ರಾಮಗಳು ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆ ಕಾಮಗಾರಿ ಸರಪಳಿ 0.00ರಿಂದ 18.725 ಕಿ.ಮೀ ಹಾಗೂ ಬಲದಂಡೆ ಕಾಲುವೆ ಸರಪಳಿ 18.419ಕಿ.ಮೀ ರಿಂದ 42.73ಕಿ.ಮೀ ವ್ಯಾಪ್ತಿಗೆ ಬರುತ್ತದೆ.<br>ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆ ಕಾಮಗಾರಿ ಸರಪಳಿ 0.00ರಿಂದ 18.725 ಕಿ.ಮೀ ಕಾಮಗಾರಿಗಳು ಪೂರ್ಣಗೊಂಡಿದ್ದು, ಭೂಸ್ವಾಧೀನ ಪ್ರಕ್ರಿಯೆ ಸಹ ಪೂರ್ಣಗೊಂಡಿರುತ್ತದೆ.<br>ಮುಂದುವರೆದು, ಸರಪಳಿ 18.419ಕಿ.ಮೀ ರಿಂದ 42.73ಕಿ.ಮೀ ನಲ್ಲಿ ಹೆಚ್ಚಾಗಿ ಅರಣ್ಯ ಪ್ರದೇಶವು ಬರುವುದರಿಂದ, ಭೂ-ಸ್ವಾಧೀನ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಕಾಶ ವ್ಯಯವಾಗಿರುತ್ತದೆ. ಸದರಿ ನಾಲಾ ಪಥವನ್ನು ಸಾಧ್ಯವಾದಷ್ಟು ಕಡಿಮೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ನಿರ್ಮಿಸುವ ಕುರಿತಂತೆ ಪ್ರಸ್ತಾವನೆಯು ನಿಗಮದ ಪರಿಶೀಲನೆಯಲ್ಲಿರುತ್ತದೆ.<br>ಅನುಮೋದಿತ ವಾರಾಹಿ ನೀರಾವರಿ ಯೋಜನಾ ವರದಿಯನ್ವಯ ವಾರಾಹಿ ಬಲದಂಡೆ ಕಾಲುವೆ ಸರಪಳಿ 18.419ಕಿ.ಮೀ ರಿಂದ 42.73ಕಿ.ಮೀ ವರೆಗಿನ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟು 405.13 ಎಕರೆಗಳಷ್ಟು ಭೂಮಿ ಅವಶ್ಯಕತೆ ಇದ್ದು, ಪ್ರಸ್ತುತ 28.71 ಎಕರೆಗಳಷ್ಟು ಭೂಸ್ವಾಧೀನ ಆಗಿರುತ್ತದೆ, ಬಾಕಿ 376.42 ಎಕರೆಗಳಷ್ಟು ಭೂಸ್ವಾದೀನಪಡಿಸಿ ಕೊಳ್ಳಬೇಕಿರುತ್ತದೆ. (ಗ್ರಾಮವಾರು ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಲಾಗಿದೆ). ಸದರಿ ಪ್ರದೇಶಕ್ಕೆ ಸಂಬಂಧಿಸಿದ ಪಟ್ಟ ಭೂಮಿ, ಡೀಮ್ಡ್ ಫಾರೆಸ್ಟ್ ಹಾಗೂ ಕುಮ್ಕಿ ಭೂಮಿಯ ಸ್ವಾಧೀನಕ್ಕಾಗಿ ಕ್ರಮ ಜರುಗಿಸಲಾಗುತ್ತಿದೆ.<br>ಯೋಜನೆಯ ಬಲದಂಡೆ ಕಾಲುವೆ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು, 2021-22 ರೊಳಗಾಗಿ ಪೂರ್ಣಗೊಳಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಜಸಂಇ 123 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 618 ಕ್ಕೆ ಅನುಬಂಧ.

ವಾರಾಹಿ ಬಲದಂಡೆ ಕಾಮಗಾರಿ 18.419ಕಿಮೀ ರಿಂದ 42.73ಕಿಮೀ ವರೆಗಿನ ಭೂಪ್ರದೇಶಗಳ ಮಾಹಿತಿ

| ಕ್ರ.ಸಂ | ಗ್ರಾಮದ ಹೆಸರು | ಯೋಜನೆಗೆ ಅಗತ್ಯವಾದ ಭೂ ವಿಸ್ತೀರ್ಣ ಎಕರೆಗಳಲ್ಲಿ | ಸ್ವಾಧೀನಪಡಿಸಿಕೊಂಡಿರುವ ಭೂ ವಿಸ್ತೀರ್ಣ ಎಕರೆಗಳಲ್ಲಿ | ಭೂಸ್ವಾಧೀನಪಡಿಸಿಕೊಳ್ಳಲು ಬಾಕಿಯಿರುವ ಭೂ ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|
| 1 | ಶಂಕರನಾರಾಯಣ | 211.41 | 28.71 | 182.7 |
| 2 | ಅಂಪಾರು | 109.83 | 0.00 | 109.83 |
| 3 | ಅಂಪಾರು, ಕಾವ್ರಾಡಿ, ಹಳ್ನಾಡು ಮತ್ತು ಶಂಕರನಾರಾಯಣ | 54.53 | 0.00 | 54.53 |
| 4 | ಕುಳ್ಳಂಜೆ | 15.2 | 0.00 | 15.2 |
| 5 | ಕಾವ್ರಾಡಿ | 14.16 | 0.00 | 14.16 |
| | ಒಟ್ಟು | 405.13 | 28.71 | 376.42 |

*****